ಓ. ಎಸ್ . 268/2020 ಪಿ.ಡಬ್ಲ್ಯೂ - 1 ಅಲ್ಲಾಭಕ್ಷ ನದಾಫ

**(ದಿನಾಂಕಃ 24-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎಸ್ ಜಿ ಎನ್ ವಕೀಲರಿಂದ -**

**1.** ನಾನು ಶಾಲೆ ಕಲಿತಿಲ್ಲ. ಈ ಕೇಸ ದಾಖಲ ಮಾಡಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಮತ್ತು ಉಳಿದ ವಾದಿಯರು ಸೇರಿ ಮಾಹಿತಿ ಕೊಟ್ಟಿರುತ್ತೇವೆ. ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವುದನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಯರು ಹಾಕಿದ ತಕರಾರನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ತಕರಾರನ್ನು ತಿಳಿದುಕೊಳ್ಳಲು ನನಗೆ ಅಡಚಣೆ ಇರಲಿಲ್ಲ. ನಾನು ಈ ಕೇಸನ್ನು ನಮ್ಮ ಆಸ್ತಿ ನಂ. ವಿಪಿಸಿ 22ಎ ಕ್ಕೆ ಸಂಬಂಧಿಸಿದಂತೆ ಹಾಕಿರುತ್ತೇನೆ. ವಿಪಿಸಿ 22ಎ ರ ಆಸ್ತಿ ಯಾರ ಹೆಸರಿಗೆ ಇದೆ ಎಂದು ದಾಖಲೆ ಹಾಜರ ಮಾಡಿದ್ದೇನೆ. ವಿಪಿಸಿ 22ಎ ಈಗ ನನ್ನ ಹೆಸರಿನಲ್ಲಿದೆ. ವಿಪಿಸಿ 22ಎ ಇದು ಸುಲೇಮಾ ಇಸ್ಮಾಯಿಲ ನದಾಫ ಇವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ವಿಪಿಸಿ 22ಎ ಆಸ್ತಿ ನನ್ನ ಅಥವಾ ನನ್ನ ತಂದೆ ಹೆಸರಿನಲ್ಲಿದೆ ಎಂದು ತೋರಿಸಲು ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 1950 ರಲ್ಲಿ ಯಾಕೂಬ ಸುಲೇಮಾನ ನದಾಫ ಇವರಿಗೆ ವಿಪಿಸಿ 22ಎ ರ ಆಸ್ತಿನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಮಾರಾಟ ಮಾಡಿದ್ದ ಆಸ್ತಿ ಬೇರೆ ಇರುತ್ತದೆ ಎನ್ನುತ್ತಾರೆ. ಸದರಿ ಆಸ್ತಿ ನಂಬರ ನನಗೆ ಗೊತ್ತಿಲ್ಲ. ಅದರ ದಾಖಲೆ ಮನೆಯಲ್ಲಿದೆ. ನಿ.ಪಿ-27 ಮತ್ತು 28 ರ ದಾಖಲೆಗಳಲ್ಲಿರುವ ಆಸ್ತಿಗಳನ್ನು ಬಿಟ್ಟು ಬೇರೆ ಆಸ್ತಿ ನಮ್ಮ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾಕೂಬಗೆ ಮಾರಾಟ ಮಾಡಿದಂತಹ ಆಸ್ತಿಯಚಕಬಂದಿ ಹಾಗೂ ದಾವೆಯಲ್ಲಿರುವ ಆಸ್ತಿಯ ಚಕಬಂದಿ ಎರಡೂ ಒಂದೇ ಇದೆ ಎಂದರೆ ಸರಿಯಲ್ಲ. ಯಾಕೂಬಗೆ ಮಾರಾಟ ಮಾಡಿದಾಗಿನಿಂದ ದಾವಾಸ್ತಿ ಕಬ್ಜಾ ನಮ್ಮಗೆ ಇಲ್ಲ ಎಂದರೆ ಸರಿಯಲ್ಲ.

**2.** ನಿ.ಪಿ-8 ಮತ್ತು 9 ರ ಫೋಟೊದಲ್ಲಿ ಕಾಣುವ ಹಳೆ ಮತ್ತು ಹೊಸ ಗೋಡೆಯ ನಡುವೆ ಇರುವ ಖುಲ್ಲಾ ಜಾಗ ಪೂರ್ವ ಪಶ್ಚಿಮ 25 ಅಡಿ , ದಕ್ಷಿಣೋತ್ತರ 17 ಅಡಿ ಇರುತ್ತದೆ . ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಆ ಜಾಗದಲ್ಲಿ ಸಂಡಾಸ ಕೋಣೆ ಕಟ್ಟಿದ್ದಾನೆ ಎಂದರೆ ನಾವು ತಕರಾರು ಮಾಡಿದ್ದರೂ ಸಹ ಸಂಡಾಸ ಮತ್ತು ಬಾತ್ ರೂಮ ಕಟ್ಟಿದ್ದಾರೆ ಎನ್ನುತ್ತಾರೆ . ನಿ.ಪಿ-14 ಮತ್ತು 15 ರಲ್ಲಿ ಕಾಣುವಂತಹ ಸಿಮೆಂಟಿನ ಟ್ಯಾಂಕ ಪೂರ್ವ ಪಶ್ಚಿಮ 8 ಅಡಿ ಹಾಗೂ ಉತ್ತರ ದಕ್ಷಿಣ 3 ಅಡಿ ಇದೆ ಎಂದರೆ ನಮ್ಮ ಜಾಗದಲ್ಲಿ ಅದನ್ನು ಕಟ್ಟಿದ್ದಾಗಿ ಹೇಳುತ್ತಾರೆ. ಅಲ್ಲಿ ಸಂಡಾಸ ಮತ್ತು ಬಾತ್ ರೂಮ ಕಟ್ಟುವಂತಹ ಜಾಗ ಮಾತ್ರ ಇದೆ , ಅದಕ್ಕಿಂತ ಹೆಚ್ಚಿನ ಜಾಗ ಇಲ್ಲ ಎಂದರೆ ಸರಿಯಲ್ಲ. ನಿ.ಪಿ-16 ಮತ್ತು 17 ರಲ್ಲಿ ಕಣುವಂತಹ

ಖುಲ್ಲಾ ಜಾಗ ನಮ್ಮದು ಎಂದು ಹೇಳುತ್ತಿದ್ದೇನೆ ಎಂದರೆ ನಿಜ. ವಿಪಿಸಿ 25 ರ ದಕ್ಷಿಣ ಬಾಜು ಇಸ್ಮಾಯಿಲ ಸುಲೆಮಾನ ನದಾಫ ಈತನಿಗೆ ಸೇರಿದ ಖುಲ್ಲಾ ಜಾಗ ಇದೆ ಎಂದರೆ ಸರಿಯಲ್ಲ. ವಿಪಿಸಿ 25 ಇದು ಇಸ್ಮಾಯಿಲ ಸುಲೆಮಾನ ನದಾಫ ಈತನ ಪಿತ್ರಾರ್ಜಿತ ಜಾಗ ಎಂದರೆ ನಿಜ. ವಿಪಿಸಿ 22 ಇದು ಯಾಕೂಬ, ಇಸ್ಮಾಯಿಲ, ಮೊದಿನ, ಹನಿಫ ಇವರ ಪಿತ್ರಾರ್ಜಿತವಾಗಿ ಬಂದಂತಹ ಒಂದು ಮನೆ ಎಂದರೆ ನಿಜ. ವಿಪಿಸಿ 22 ರಲ್ಲಿ ಹನಿಫ ಈತನ ಪಾಲು ಪ್ರತ್ಯೆಲಕವಾಗಿಹಿ ಬಿಟ್ಟು ಯಾಕೂಬ ಇಸ್ಮಾಯಿಲ ಮತ್ತು ಮೊದಿನ ತಮ್ಮ ಮನೆಯನ್ನು 1/3 ಹಂಚಿಕೊಂಡಿದ್ದಾರೆ ಎಂದರೆ ನಿಜ. ವಿಪಿಸಿ ನಂ. 22 ಇವರುವುದನ್ನು ಈಗ 22 ಹಾಗೂ 22ಎ ಎಂದು ಎರಡು ಭಾಗ ಮಾಡಿಕೊಂಡಿದ್ದಾರೆ ಎಂದರೆ ನಿಜ. ಆ ಪ್ರಕಾರ ಯಾಕೂಬ ಮತ್ತು ಇಸ್ಮಾಯಿಲ ಈತನ ಮಗ ಸುಲೇಮಾನ ಇವರ ಹೆಸರು ದಾಖಲ ಆಗಿದೆ ಎಂದರೆ ನಿಜ. ಇಸ್ಲಾಯಿಲ ಸುಲೇಮಾನ ನದಾಫ ಈತನ ಹೆಸರಿನಲ್ಲಿ ವಿಪಿಸಿ ನಂ. 25 ಇದೆ ಎಂದರೆ ಅದು ನಮ್ಮ ಮನೆಗೆ ಲಗತ್ತಾಗಿಲ್ಲ ಅದು ಬೇರೆ ಕಡೆಗೆ ಇರುತ್ತದೆ ಎಂದು ಹೇಳುತ್ತಾರೆ. ವಿಪಿಸಿ ನಂ, 22ಎ ಮನೆಗೆ ಸುಲೇಮಾನ ಇಸ್ಲಾಯಿಲ ನದಾಫ ಇವರು ಕಂದಾಯ ತುಂಬುತ್ತಿದ್ದಾನೆ ಎಂದರೆ ನಿಜ. ವಿಪಿಸಿ ನಂ. 27 ಇದು ಯಾಕೂಬ ಸುಲೇಮಾನ ನದಾಫ ಇವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ವಿಪಿಸಿ ನಂ. 23 ಇದು ದಸ್ತಗೀರ ಗುಲಾಬ ನದಾಫ ಹಾಗೂ ಹಸನಮ್ಮ ಲಿಯಾಖತ ನದಾಫ ಇವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ವಿಪಿಸಿ ನಂ. 24 ಇದು ಗಜಬರ ರಾಜೆಸಾಬ ನದಾಫ ಇವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

3. ನಾನು ಹಾಜರ ಮಾಡಿದ ನಿ.ಪಿ-1 ರ ಗ್ರಾಮ ಪಂಚಾಯತಿಯ ಪ್ರಮಾಣ ಪತ್ರದಲ್ಲಿ ಆಸ್ತಿ ನಂ. 22 ಇದು ಗಜಬರ ರಾಜೆಸಾಬ ನದಾಫ ಇವರ ಆಸ್ತಿ ಎಂದು ಬೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ಜೊತೆಗೆ ಹಾಕಿದಂತಹ ಕಾಗದ ಪತ್ರಗಳನ್ನು ನನ್ನ ತಮ್ಮ ಹಾಜರ ಮಾಡಿರುತ್ತಾರೆ. ವಿಪಿಸಿ ನಂ. 22ಎ ಯಾಕೂಬ ಸುಲೇಮಾನ ನದಾಫ ಹಾಗೂ ಸುಲೇಮಾನ ಇಸ್ಮಾಯಿಲ ನದಾಫ ಇವರ ಹೆಸರು ದಾಖಲ ಆಗಿದೆ ಎಂದರೆ ಸರಿಯಲ್ಲ. ನಿ.ಪಿ-3 ರ ಪ್ರಕಾರ ಆಸ್ತಿ ನಂ. 27 ಇದು ಯಾಕೂಬ ಸುಲೇಮಾನ ನದಾಫ ಇವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ವಿಪಿಸಿ ನಂ. 25 ಇಸ್ಮಾಯಿಲ ಸುಲೇಮಾನ ನದಾಫ ಇವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಿ.ಪಿ-1 ರಿಂದ 4 ಇವು ನಾನೇ ಹಾಜರ ಮಾಡಿದಂತಹ ದಾಖಲೆ ಎಂದರೆ ನಿಜ.

4. ನನ್ನ ತಮ್ಮ ಸಲೀಮ ವಿಪಿಸಿ ನಂ. 27 ರಲ್ಲಿ ಖಾಲಿ ಜಾಗ ಇದೆ , ಮನೆ ಕಟ್ಟುತ್ತಿದ್ದಾರೆ ಅದನ್ನು ಬಂದ ಮಾಡಿಸಬೇಕೆಂದು ತಹಶೀಲ್ದಾರ ಕಛೇರಿಗೆ ಕೇಳಿ ಅರ್ಜಿ ಕೊಟ್ಟಿದ್ದರು ಎಂದರೆ ನಿಜ. ಅದು ನಿ.ಪಿ-5 ಎಂದು ಇದೆ ಎಂದರೆ ನಿಜ. ಅದನ್ನು ನಾನು ಮತ್ತು ಸಲೀಮ ಇಬ್ಬರೂ ಸೇರಿ ಹೇಳಿ ಬರೆಸಿಕೊಟ್ಟಿದ್ದೇನೆ ಎಂದರೆ ನಿಜ. ಆ ಅರ್ಜಿ ಬರೆಸುವಾಗ ನಾವು ಕಾಗದಪತ್ರವನ್ನು ಪರಿಶೀಲನೆ ಮಾಡಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ-5 ರಲ್ಲಿ ಬರೆದಂತಹ ಆಸ್ತಿ ವಿಪಿಸಿ 27 ಯಾರದು ಎಂದರೆ ಸಾಕ್ಷಿ ನನ್ನ ತಮ್ಮನನ್ನೇ ಕೇಳಬೇಕು ಎನ್ನುತ್ತಾರೆ.

**5.** ದಿನಾಂಕ **12-08-2020** ರಂದು ನನ್ನ ತಮ್ಮ ಸಲೀಮ ಗ್ರಾಮ ಪಂಚಾಯತಿಗೆ ಅಶಜಿ ಕೊಟ್ಟಿದ್ದ ಎಂದರೆ ನಿಜ. ವಿಪಿಸಿ ನಂ. **394** ರ ಉತಾರ ಕೊಡಬೇಕೆಂದು , ಅದು ನನ್ನ ತಂದೆಯ ಆಸ್ತಿ ಎಂದು ಅರ್ಜಿ ಕೊಟ್ಟಿದ್ದೆವು ಎಂದರೆ ನಿಜ. ವಿಪಿಸಿ ನಂ. **394** ಇದು ನಾನು ಈಗ ಸದ್ಯ ಜನತಾ ಪ್ಲಾಟಿನಲ್ಲಿ ವಾಸ ಬವಾಗಿದ್ದ ಮನೆ ಎಂದರೆ ನಿಜ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಹೆಸರಿನಲ್ಲಿ ವಾಸರಾ ಪ್ರಕಾರ ಹೆಸರು ಹಚ್ಚಿ ಕೊಂಡಿದ್ದೇವೆ ಎಂದರೆ ನಿಜ. ಪ್ರತಿವಾದಿ ಮನೆ ಕಟ್ಟುವಾಗ ಅದುನ್ನು ಸ್ಟಾಪ ಮಾಡಿ ಎಂದು ಪೋಲಿಸರಿಗೆ ಅರ್ಜಿ ಕೊಟ್ಟಿದ್ದೆವು ಎಂದರೆ ನಿಜ. ನಿ.ಪಿ**-7** ರ ಅರ್ಜಿಯಲ್ಲಿ ವಿಪಿಸಿ ನಂ. **27** ರ ಜಾಗದಲ್ಲಿ ಪ್ರತಿವಾದಿ ಮನೆ ಕಟ್ಟುತ್ತಿದ್ದಾನೆ ಎಂದು ಬರೆಸಿದ್ದೆವು ಎಂದರೆ ನಿಜ. ನಿ.ಪಿ**-1** ರಿಂದ **7** ರ ದಾಖಲೆಗಳು ಸರಿ ಇಲ್ಲ.

**6.** ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ ಎಲ್ಲ ವಿಚಾರ ಸುಳ್ಳು ಇದೆ ಎಂದರೆ ಸರಿಯಲ್ಲ. ವಿಪಿಸಿ **22**ಎ ಜಾಗ ನನ್ನ ಕಬ್ಜಾದಲ್ಲಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಬಲ್ಲೆ. ನನ್ನ ಪ್ರಮಾಣ ಪತ್ರದ ಫ್ಯಾರಾ ನಂ. **8** ರಲ್ಲಿ ಹೆಳಿದ ಹಾಗೆ ದಿನಾಂಕ **4-4-2020** ರಂದು ಪ್ರತಿವಾದಿ ನಂ. **4** ಇವರು ಒಪ್ಪಿಗೆ ಪ್ರಮಾಣ ಪತ್ರವನ್ನು ಬರೆದುಕೊಟ್ಟಿದ್ದು ಇರುತ್ತದೆ , ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಬಲ್ಲೆ. ಆ ಒಪ್ಪಿ ಗೆ ಪತ್ರದಲ್ಲಿ ವಿಪಿಸಿ ನಂ **27** ಎಂದು ಆ ಆಸ್ತಿ ದಾಖಲ ಆಗಿದೆ ಎಂದರೆ ಸರಿಯಲ್ಲ. ವಿಪಿಸಿ **22**ಎ ರಲ್ಲಿ ಪ್ರತಿವಾದಿ ನಂ. **2** ಈತನ ಹೆಸರು ಪೋಕಳದಲ್ಲಿ ದಾಖಲ ಆಗಿದೆ ಎಂದು ಯಾವ ಆಧಾರದ ಮೇಲೆ ಬರೆದಿದ್ದೇನೆ ಎಂದರೆ ಸಾಕ್ಷಿ ಆತ ನಮ್ಮ ಖುಲ್ಲಾ ಜಾಗದಲ್ಲಿ ಒತ್ತುವರಿ ಮಾಡಲು ಬಂದಿದ್ದರಿಂದ ಆ ರೀತಿ ನಾನು ಬರೆದಿದ್ದೇನೆ ಎಂದು ಹೇಳುತ್ತಾರೆ. ವಿಪಿಸಿ ನಂ. **22**ಎ ಆಸ್ತಿಯನ್ನು ವಿಪಿಸಿ ನಂ. **27** ಎಂದು ಭಾವಿಸಿದ್ದೇನೆ ಎಂದರೆ ಸರಿಯಲ್ಲ.

**7.** ದಾವಾ ಆಸ್ತಿಯ ಜಾಗೆಯಿಂದ **1** ಕಿ.ಮೀ ದೂರದಲ್ಲಿ ಪ್ಲಾಟ ಏರಿಯಾದಲ್ಲಿ ಸುಮಾರು **30** ವರ್ಷಗಳ ಹಿಂದೆ ಮನೆ ಕಟ್ಟಿಕೊಂಡಿದ್ದೇವೆ. ಆ ಮನೆಯ ವಿಪಿಸಿ ನಂಬರ ಹೇಳಲು ಬರುವುದಿಲ್ಲ. ನಾವುಗಳು ಪ್ಲಾಟ ಏರಿಯಾದಲ್ಲಿ **4** ಮನೆ ಕಟ್ಟಿಕೊಂಡಿದ್ದೇವೆ ಎಂದರೆ ಸಾಕ್ಷಿ ಮನೆ ಬೇರೆ ಇದೆ ಆದರೆ ವ್ಯವಹಾರ ಒಂದೇ ಮಾಡುತ್ತೇವೆ ಎಂದು ಹೇಳುತ್ತಾರೆ. ನಾವು **1979** ರಿಂದ ದಾವಾ ಜಾಗಕ್ಕೆ ಹೋಗಿಲ್ಲ ಎಂದರೆ ಸಾಕ್ಷಿ ನಾವು ಆ ಜಾಗಕ್ಕೆ ಹೋಗಿಲ್ಲ ಹಾಗೂ ಪ್ರತಿವಾದಿಗುಳಾ ಆ ಜಾಗಕ್ಕೆ ಹೋಗಿರಲಿಲ್ಲ , ಅದು ಖುಲ್ಲಾ ಇತ್ತು , ಈಗ **5** ವರ್ಷದ ಹಿಂದೆ ಪ್ರತಿವಾದಿಗಳು ಅಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಆ ಜಾಗ ಖುಲ್ಲಾ ಇತ್ತು ಹಾಗೂ ಅದು ನಮ್ಮ ಹೆಸರಿನಲ್ಲಿತ್ತು ಎಂದು ತೋರಿಸಲು ನಾನು ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ಪರತಿವಾದಿಗಳು ಟಾಯಲೆಟ ಮತ್ತು ಬಾತ್ ರೂಮ ಕಟ್ಟಿದ್ದರಿಂದ ಆ ಜಾಗ ನಮ್ಮ ಹೆಸರಿನಲ್ಲಿದ್ದರೂ ಸಹ ಅದಕ್ಕೆ ನಾವೇ ಮಾಲಿಕರು ಎಂದು ಘೋಷಣ ಮಾಡುವ ಪ್ರಸಂಗ ಬಂತು. ಈ ದಾವೆ ಹಾಕಲು ಕಾರಣ ಎಂದು ಉಂಟಾಯಿತು ಎಂದು ನನಗೆ ದಿನಾಂಕ ಹೇಳಲು

ಬರುವುದಿಲ್ಲ. ಈ ದಾವಾ ಆಸ್ತಿ ನಮಗೆ ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಖೊಟ್ಟಿ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**8.** ದಾವಾ ಹಾತ್ ನಕಾಶೆ ತೆಗೆಯಲು ನಾನೇ ಮಾಹಿತಿ ಕೊಟ್ಟೆ . ಸದರಿ ಮ್ಯಾಪನಲ್ಲಿ ತೋರಿಸಿದ ವಿಪಿಸಿ ನಂ. **22** ರ ಪೂರ್ವ ಬಾಜು ವಿಪಿಸಿ **27** ಬರುತ್ತದೆ ಎಂದರೆ ಸರಿಯಲ್ಲ. ಎಬಿಸಿಡಿ ಜಾಗ ವಿಪಿಸಿ ನಂ. **25** ಕ್ಕೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಎಬಿಸಿಡಿ ಜಾಗ ಅಳತೆ ಮಾಡಿಸಿದರೆ ನಾನು ಹೇಳಿದಷ್ಟು ಅಲ್ಲಿ ಅಳತೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾತ್ ನಕಾಶೆಗೂ ಹಾಗೂ ನಿ.ಪಿ-**1** ರಿಂದ **4** ರ ದಾಖಲೆಗೂ ತಾಳೆ ಆಗುವುದಿಲ್ಲ. ಎಂದರೆ ಸರಿಯಲ್ಲ. ಸದರಿ ಜಾಗ ನಮ್ಮದೇ ಇದ ಎಂದು ತೋರಿಸಲು ಅಕ್ಕಪಕ್ಕದವರನ್ನು ಸಾಕ್ಷಿ ಮಾಡಿಸುತ್ತೇನೆ.

**9.** ವಿಪಿಸಿ **25** ರಲ್ಲಿ ಇಸ್ಮಾಯಿಲ ಸುಲೇಮಾನ ನದಾಫ ಈತನ ಹೆಸರು ಮಾತ್ರ ಇದೆ ಎಂದರೆ ನಿಜ. ವಿಪಿಸಿ **25** ರಲ್ಲಿ ಪ್ರತಿವಾದಿ **2** ಮತ್ತು **3** ಇವರ ಹೆಸರು ಇಲ್ಲ ಎಂದರೆ ಸರಿಯಲ್ಲ. ವಿಪಿಸಿ **22**ಎ ರಲ್ಲಿ ಪ್ರತಿವಾದಿ **1** ಮತ್ತು **3** ಇವರ ಹೆಸರು ಇಲ್ಲ ಎಂದರೆ ಸರಿಯಲ್ಲ. ಅವರ ಹೆಸರು ದಾಖಲೆಯಲ್ಲಿ ಇರದೇ ಇದ್ದರೂ ಸಹ ನಾನು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಮಾಡುವಗ ನಾನು ಈ ದಾವೆ ಕಬ್ಜಾ ವೆಹಿವಾಟಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಜಾಗದದಲ್ಲಿ ಟಾಯಲೆಟ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ತೋರಿಸಿದ ಪಂಚರು ನನಗೆ ಬೇಕದವರು ಆದ್ದರಿಂದ ಅವರ ಹೆಸರು ತೋರಿಸಿದ್ದೇನೆ ಎಂದರೆ ಸರಿಯಲ್ಲ.

**ವಾಟಿ ಸವಾಲು : 4ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರ ಆಗಿದ್ದು ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**